# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯದ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 02.01.2021ರಂದು ಮಲ್ಲಸಂದ್ರ ವಾರ್ಡ್ ನಂ.13ರಲ್ಲಿ ನಡೆಸಲಾದ ವಾರ್ಡ್ ಸಭೆ ನಡವಳಿಕೆಗಳು

ದಿನಾಂಕ: 02.01.2021ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ಮಲ್ಲಸಂದ್ರ ವಾರ್ಡ್ ಸಂಖ್ಯೆ 13ರ ಕಛೇರಿಯಲ್ಲಿ ವಾರ್ಡ್ ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಡಾ.ಸುರೇಶ್.ಎಸ್‌ರವರು, ಸಹಾಯಕ ಅಭಿಯಂತರರಾದ ಶ್ರೀ ವೆಂಕಟೇಶಪ್ಪರವರು, ಆರೋಗ್ಯ ಇಲಾಖೆಯ ಶ್ರೀ ಪಾರ್ಥರವರು, ಘನತ್ಯಾಜ್ಯ ನಿರ್ವಹಣೆಯ ಶ್ರೀ ಲೋಹಿತ್‌ಕುಮಾರ್, ವಿದ್ಯುತ್ ಉಪವಿಭಾಗದಿಂದ ಶ್ರೀ ಶಶಿ (ಬೀದಿ ದೀಪ ನಿರ್ವಹಣೆ) ಕಲ್ಯಾಣ ಇಲಾಖೆಯ ಶ್ರೀ.ವೆಂಕಟರಾಯಪ್ಪ, ಬೆಂಗಳೂರು ಜಲ ಮಂಡಳಿಯಿಂದ ಲೋಕನಾಥ, ಇನ್ಸ್‌ಪೆಕ್ಟರ್ ಪಶುಪಾಲನೆ ಇಲಾಖೆಯಿಂದ ಶ್ರೀಮತಿ ಕೆ.ಎಸ್ ಸುಧಾಮಣಿ ಭಾಗವಹಿಸಿದ್ದರು.

**ಸದರಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಗಳನ್ನು ತೀರ್ಮಾನಿಸಲಾಗಿದೆ.**

- **ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ**

1. ವಾರ್ಡ್‌ಗಳಲ್ಲಿ ಬೀದಿ ದೀಪಗಳ ಬಗ್ಗೆ ದೂರುಗಳು ಬಂದಾಗ ಬಂದಿರುವ ದೂರಿನ ಸ್ಥಳದ ಜಿ.ಪಿ.ಎಸ್. ಫೋಟೋವನ್ನು ಹಾಕಿ ಅದಷ್ಟು ಬೇಗನೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಲಾಯಿತು.
2. ವಾರ್ಡ್‌ಗಳಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದ ಶ್ರೀ ವೆಂಕಟೇಶ್, ಎಂ.ಪಿ. ಎಲೆಕ್ಟ್ರಿಕಲ್ಸ್ ಗುತ್ತಿಗೆದಾರರನ್ನು ಮುಂದಿನ ಸಭೆಗೆ ಹಾಜರಾಗಲು ಎಲ್ಲಾ ವಾರ್ಡ್ ಸದಸ್ಯರುಗಳು ಕೋರಿದ್ದು ಅದರಂತೆ ಗುತ್ತಿಗೆದಾರರನ್ನು ಮುಂದಿನ ಸಭೆಗೆ ಹಾಜರಾಗಲು ಸೂಚಿಸಲಾಯಿತು ಹಾಗೂ ಶ್ರೀ ಶಶಿರವರು, ಬೀದಿದೀಪ ನಿರ್ವಹಣೆರವರಿಗೆ ಸರಿಯಾಗಿ ಕಾರ್ಯನಿರ್ವಹಿಸಲು ಸೂಚಿಸಲಾಯಿತು.

- **ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ**

ವಾರ್ಡ್ ನಂ. 13ರಲ್ಲಿ ಇರುವ ಮಲ್ಲಸಂದ್ರ ಕೆರೆಯ ಉಸ್ತುವರಿಯನ್ನು ಈಗಾಗಲೇ ಲೇಕ್ ಎ.ಇ.ಇ. ರವರು ಕೆರೆಯ ಬೌಂಡರಿಯನ್ನು ಮಾರ್ಕ್ ಮಾಡಿ ತೆರೆವುಗೊಳಿಸಲು ಸೂಚಿಸಿರುತ್ತಾರೆ. ಆದರೆ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರು ಹಾಲಿ ಮಾಡಿರುವ ಮಾರ್ಕ್ ಸರಿ ಇಲ್ಲಾ ಅದ್ದರಿಂದ ಮತ್ತೊಮ್ಮೆ ಕೆರೆಯ ಸರ್ವೆ ಮಾಡಿ, ಗಡಿಯನ್ನು ಗುರುತಿಸಲು ಕೋರಿರುತ್ತಾರೆ. ಅದರಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ತುರ್ತಾಗಿ ಸರ್ವೆ ಮಾಡಿಸಿ ಕೆರೆಯ ಹದ್ದು ಬಸ್ತುನ್ನು ಫಿಕ್ಸ್ ಮಾಡಿಸಿಕೊಡಲು ಸಭೆಯಲ್ಲಿ ಸೂಚಿಸಲಾಯಿತು ಮತ್ತು ಲೇಕ್ ಎಇಇ ರವರಿಗೆ ಈ ಸಂಬಂಧ ತುರ್ತಾಗಿ ಕ್ರಮಕೈಗೊಳ್ಳಲು ಸೂಚಿಸಲಾಯಿತು.

- **ಆರೋಗ್ಯ ಇಲಾಖೆ ಹಾಗೂ ಘನತ್ಯಾಜ್ಯ ವಿಭಾಗಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

ಆರೋಗ್ಯ ಇಲಾಖೆಯ ಶ್ರೀ ಪಾರ್ಥರವರು (ಹಿರಿಯ ಆರೋಗ್ಯ ಪರಿವೀಕ್ಷಕರು)

Scanned by CamScanner

1. ಪ್ರದೇಶ ವಾರು ಸೊಳ್ಳೆ ಔಷಧಿಯನ್ನು ಸಮರ್ಪಕವಾಗಿ ಸಿಂಪಡಿಸುತ್ತಿರುವುದಾಗಿ ತಿಳಿಸಿದರು.
2. ವಾರ್ಡ್ ಸಮಿತಿಯ ಸದಸ್ಯರು ಸೊಳ್ಳೆ ಔಷಧಿಯನ್ನು ಎಷ್ಟು ಜನ ಸಿಂಪಡಿಸುತ್ತಾರೆ. ಎಷ್ಟು ಮಿಷನ್‌ಗಳನ್ನು ಉಪಯೋಗಿಸಿ ಸಿಂಪಡಿಸಿದ್ದಾರೆ ಎಂದು ಪ್ರಶ್ನಿಸಿದರು. ಅದರಂತೆ ತುರ್ತಾಗಿ ಮುಂದಿನ ಸಭೆಯಲ್ಲಿ ಸಮರ್ಪಕವಾಗಿ ಉತ್ತರ ನೀಡಲು ಸೂಚಿಸಲಾಯಿತು.
3. ವಾರ್ಡ್ 13ರ ಸಮಿತಿ ಸದಸ್ಯರಾದ ಶ್ರೀ ಬೈಲಪ್ಪರವರು ರವೀಂದ್ರನಗರ, 11ನೇ ರಸ್ತೆಯಲ್ಲಿ ಸರಿಯಾಗಿ ಕಸವನ್ನು ತೆಗೆಯುತ್ತಿಲ್ಲ ಎಂದು ಆಕ್ಷೇಪಿಸಿದರು ಉತ್ತರವಾಗಿ ಶ್ರೀ ಲೋಹಿತ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
4. ವಾರ್ಡ್ 13 ರ ಸಮಿತಿ ಸದಸ್ಯರಾದ ಶ್ರೀ ಬೈಲಪ್ಪರವರು ಹಾಲಿ ಒಣ/ಹಸಿ ಕಸವನ್ನು ತೆಗೆಯುತ್ತಿದ್ದು ಹಾಲಿ ಎಷ್ಟು ಆಟೋಗಳು ಮತ್ತು ಚಾಲಕರು ಕಾರ್ಯನಿರ್ವಹಿಸಿಸುತ್ತಿರುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ಕೋರಿದ್ದು ಅದರಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.
5. ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಪ್ರತಿ ದಿನ ಕೋವಿಡ್–19 ಟೆಸ್ಟ್ ಮಾಡಲಾಗುತ್ತಿದೆ. ಲಿಂಕ್ ವರ್ಕರ್ಸ್‌ಗಳು ಆಸ್ಪತ್ರೆಯಿಂದ ಮೆಡಿಕಲ್ ಕಿಟ್‌ಗಳನ್ನು ಪಡೆದು ರೋಗಿಗಳ ಸ್ಥಳಕ್ಕೆ ನೀಡುವ ಕೆಲಸ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಂಪ್ ನಡೆಸುವ ಕಾರ್ಯವನ್ನು ಮಾಡುತ್ತಿದಾರೆ ಹಾಗು ವಾರದಲ್ಲಿ ಮೂರು ದಿವಸ ಹೋಮ್ ಕ್ವಾರೆಂಟೈನ್ ಆದವರನ್ನು ಬೇಟಿ ಮಾಡಿ ಯೋಗಕ್ಷೇಮ ವಿಚಾರಿಸುತ್ತಿದಾರೆ ಎಂದು ತಿಳಿಸಿದರು.

- **ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮಲ್ಲಸಂದ್ರ ರಸ್ತೆ ವಿಭಾಗ ಕಛೇರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

- ಮಲ್ಲಸಂದ್ರ–ಶೆಟ್ಟಿಹಳ್ಳಿ ಮುಖ್ಯರಸ್ತೆಯಲ್ಲಿ ಹಳೆಯ ಪಶುವೈದ್ಯ ಶಾಲೆಯ ಹತ್ತಿರ ಎರಡು ರಸ್ತೆ ವಿಭಜಕಗಳನ್ನು ನಿರ್ಮಿಸಿಕೊಡಲು ಸಂಬಂಧಪಟ್ಟ ರಸ್ತೆ ಇಲಾಖೆಯವರಿಗೆ ಸೂಚಿಸಲು ಶ್ರೀ ಲಕ್ಷ್ಮಿಪತಿರವರು ವಾರ್ಡ್ ಸಮಿತಿ ಸದಸ್ಯರು ಕೋರಿದ್ದು ಅದರಂತೆ ವಿಭಜಕಗಳನ್ನು ನಿರ್ಮಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ.**

ಹಾಲಿ ಮಲ್ಲಸಂದ್ರ ವಾರ್ಡ್‌ನಲ್ಲಿ ಹಲವಾರು ಕಡೆ ರಸ್ತೆಗಳನ್ನು ಅಗೆದು ಒಳಚರಂಡಿ ಮತ್ತು ಕಾವೇರಿ ಪೈಪ್‌ಗಳನ್ನು ಅಳವಡಿಸುವುದು ಕಂಡು ಬಂದಿದ್ದು, ಈ ಕಾಮಗಾರಿಗಳನ್ನು ನಿರ್ವಹಿಸುವ ಮೊದಲು ಯಾವ ರಸ್ತೆಗಳಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ ಎಂಬ ಬಗ್ಗೆ ವಾರ್ಡ್‌ನ ಬಿಬಿಎಂಪಿ ಇಂಜಿನಿಯರ್‌ವರಿಗೆ ಮಾಹಿತಿ ನೀಡಲು ಸೂಚಿಸಿ ಹಾಗೂ ಈ ಕಾಮಗಾರಿಗಳಿಗೆ ಸಂಬಂಧಿಸಿದ ಅಂದಾಜು ಪಟ್ಟಿಗಳು ಹಾಗೂ ನೀಡಿರುವ ಬಿಲ್ಲುಗಳ ವಿವರಗಳನ್ನು ವಾರ್ಡ್ ಸಮಿತಿಗೆ ಪ್ರತಿ ಸಭೆಗೆ ಸಲ್ಲಿಸಲು ಸೂಚಿಸಲಾಯಿತು. ಮತ್ತು ಹಾಲಿ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆಗಳಲ್ಲಿ ಅಗೆದಿರುವ ಕಾಂಕ್ರೀಟ್/ಮಣ್ಣನ್ನು ತೆಗದು "Wetmix macdom" ಹಾಕಿ ಸಾರ್ವಜನಿಕರು ಓಡಾಡಲು ಅನುಕೂಲ ಮಾಡಿಕೊಡುವಂತೆ ಸೂಚಿಸಲಾಯಿತು.

Scanned by CamScanner

**ಕಂದಾಯ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ**

ಹಾಲಿ ವೋಟರ್ ಐಡಿ ನೀಡುವ ಕಾರ್ಯವು ಚಾಲನೆಯಲ್ಲಿದ್ದು, ಇದಕ್ಕೆ ಸಂಬಂಧಿಸಿದಂತೆ, ವಾರ್ಡ್ ಕಛೇರಿಯಲ್ಲಿರುವ ಕಂದಾಯ ಕಛೇರಿಯಲ್ಲಿ ವೋಟರ್ ಐಡಿ ಮಾಡಿಸಲು ಬರುವ ಎಲ್ಲಾ ಸಾರ್ವಜನಿಕರಿಗೆ ವೋಟರ್ ಐಡಿಯನ್ನು ನೀಡಲು ಸೂಚಿಸಲಾಯಿತು.

**ಇತರೆ ವಿಷಯಗಳು**

1. ವಾರ್ಡ್ 13ರ ಸಮಿತಿ ಸದಸ್ಯರಾದ ಶ್ರೀ ಬೈಲಪ್ಪರವರು ಹಾಲಿ 40.ಅಡಿ ಅಗಲದ ರಸ್ತೆಯಲ್ಲಿ ಎಷ್ಟು ಕೋಳಿ, ಮಾಂಸ, ಮೀನಿನ ಅಂಗಡಿಗಳಿಗೆ ಲೈಸನ್ಸ್ ನೀಡಲಾಗಿದೆ ಮತ್ತು 30.ಅಡಿ ಅಗಲದ ರಸ್ತೆಯಲ್ಲಿ ಎಷ್ಟು ಕೋಳಿ, ಮಾಂಸ, ಮೀನಿನ ಅಂಗಡಿಗಳಿಗೆ ಲೈಸನ್ಸ್ ನೀಡಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಪಶುವೈದ್ಯೆ ಇಲಾಖೆಯ ಸಿಬ್ಬಂಧಿಗಳಿಗೆ ಕೇಳಲಾಗಿದ್ದು ಸದರಿ ಅಧಿಕಾರಿಗಳಿಗೆ ಮುಂದಿನ ಸಭೆಯಲ್ಲಿ ಮೇಲಿನ ಎಲ್ಲ ಮಾಹಿತಿಯನ್ನು ನೀಡಲು ಸೂಚಿಸಲಾಯಿತು.
2. ವಾರ್ಡ್ 13ರ ಸಮಿತಿ ಸದಸ್ಯರಾದ ಶ್ರೀ ಬೈಲಪ್ಪರವರು ವಾರ್ಡ್ ನಂ.13ರಲ್ಲಿ ಇಲ್ಲಿಯವರಿಗೆ ಅರಣ್ಯ ಮತ್ತು ತೋಟಗಾರಿಗೆ ಇಲಾಖೆ ವತಿಯಿಂದ ಎಷ್ಟು ಗಿಡಗಳನ್ನು ನೆಡಲಾಗಿದೆ ಮತ್ತು ಹಾಲಿ ವಾರ್ಡ್ ನಂ.13ರಲ್ಲಿ ಎಷ್ಟು ಮರಗಳು ಇವೆ ಎಂಬ ಮಾಹಿತಿಯನ್ನು ಕೋರಿದ್ದು ಸಂಬಂಧಪಟ್ಟ ಅರಣ್ಯ ಮತ್ತು ತೋಟಗಾರಿಗೆ ಇಲಾಖೆಯ ಅಧಿಕಾರಿಗಳಿಗೆ ಮುಂದಿನ ಸಭೆಯಲ್ಲಿ ಮೇಲಿನ ಎಲ್ಲ ಮಾಹಿತಿಯನ್ನು ನೀಡಲು ಸೂಚಿಸಲಾಯಿತು.
3. ಪೈಪ್‌ಲೈನ್ ಪಾರ್ಕ್‌ನಲ್ಲಿರುವ ಲೈಟ್‌ಗಳ ಸ್ವಿಚ್‌ಗಳನ್ನು ಯಾರೋ ಕೇಡಿಗೇಡಿಗಳು ತೆಗೆಯುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಈ ವಿಷಯದ ಬಗ್ಗೆ ಗಮನ ಹರಿಸಲು ಸಂಬಂಧಪಟ್ಟ ಪೋಲೀಸ್ ಇಲಾಖೆಯವರಿಗೆ ಸೂಚಿಸಲಾಯಿತು.
4. ರಸ್ತೆಯ ಬದಿಗಳಲ್ಲಿರುವ ಮರಗಳನ್ನು ಅರಣ್ಯ ಇಲಾಖೆಯ ಸಿಬ್ಬಂಧಿಗಳು ಹಾಗೂ ಬೆಸ್ಕಾಂ ಸಿಬ್ಬಂಧಿಗಳು ಕಡಿಯುತ್ತಿದ್ದು ಕಡಿದ ಮರಗಳ ಕೊಂಬೆಗಳನ್ನು ಎರಡು ಇಲಾಖೆಯ ಸಿಬ್ಬಂಧಿಗಳು ಸಮನ್ವಯ ಸಾಧಿಸಿ ಸ್ವಚ್ಛಗೊಳಿಸಲು ಸೂಚಿಸಲಾಯಿತು

ನೋಡಲ್ ಅಧಿಕಾರಿಗಳು ಹಾಗು ಅಧ್ಯಕ್ಷರು,
ವಾರ್ಡ್ ಸಂಖ್ಯೆ.13 ಮಲ್ಲಸಂದ್ರ

ಸಹಾಯಕ ಅಭಿಯಂತರರು ಹಾಗು ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ.13, ಮಲ್ಲಸಂದ್ರ

**ಪ್ರತಿಯನ್ನು:-**

1. ಮಾನ್ಯ ಆಯುಕ್ತರು, ಬಿಬಿಎಂಪಿ ನರಸಿಂಹರಾಜ ಚೌಕ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಅಧ್ಯಕ್ಷರು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಮಾನ್ಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

Scanned by CamScanner